## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ:ಗ್ರಾಅಪ 115 ಜಿಪಸ 2011, ಬೆಂಗಳೂರು, ದಿನಾಂಕ; 04-06-2011**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಪ್ರಕರಣ 72 ರೊಂದಿಗೆ ಓದಲಾದಂತೆ ಪ್ರಕರಣ 311 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ಕರ್ನಾಟಕ ಪಂಚಾಯತ್ ರಾಜ್ (ಒತ್ತುವರಿಗಳನ್ನು ತೆರವುಗೊಳಿಸುವ) ನಿಯಮಗಳು, 2011ನ್ನು ಪ್ರಸ್ತಾಪಿಸಿ ಕರಡನ್ನು ಅಧಿಸೂಚನೆ ಸಂಖ್ಯೆ: ಗ್ರಾಅಪ 115 ಜಿಪಸ 2011, ದಿನಾಂಕ: 28-04-2011ರ ಮೂಲಕ ಕರ್ನಾಟಕ ರಾಜ್ಯಪತ್ರದ ವಿಶೇಷ ಪತ್ರಿಕೆಯ ಭಾಗ IV-A ಸಂಖ್ಯೆ: 450 ದಿ: 28-04-2011 ರಲ್ಲಿ ಪ್ರಕಟಿಸಿದ್ದು, ಆ ಮೂಲಕ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳಿಂದ 15 ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ :

ಮತ್ತು ದಿ:28-04-2011ರ ವಿಶೇಷ ರಾಜ್ಯಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದಿರಂದ:

ಸದರಿ ಕರಡು ನಿಯಮದ ಬಗ್ಗೆ ರಾಜ್ಯ ಸರ್ಕಾರಕ್ಕೆ ಯಾವುದೇ ಸಲಹೆಗಳು ಬಾರದಿರುವದರಿಂದ:

ಈಗ 1993ರ ಕರ್ನಾಟಕ ಪಂಚಾಯತ್ ರಾಜ್ (ಅಧಿನಿಯಮ ಸಂಖ್ಯೆ 14) 311 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಕರ ಸರ್ಕಾರವು ಈ ಕೆಳಕಂಡಂತೆ ನಿಯಮಗಳನ್ನು ರಚಿಸುತ್ತದೆ.

## ನಿಯಮಗಳು

(1) **ಹೆಸರು ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಪಂಚಾಯತ್ ರಾಜ್ (ಒತ್ತುವರಿಗಳನ್ನು ತೆರವುಗೊಳಿಸುವ) ನಿಯಮಗಳು, 2011 ಎಂದು ಕರೆಯತಕ್ಕದ್ದು;

(2) ಇದು ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು,

(2) **ಅರ್ಥ ವಿವರಣೆ** F ನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,

(ಅ) **"ಅಧಿನಿಯಮ"** ಎಂದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)

(ಆ) **"ಸಕ್ಷಮ ಪ್ರಾಧಿಕಾರ"** ಎಂದರೆ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಈ ನಿಯಮಗಳ ಉದ್ದೇಶಗಳಿಗಾಗಿ ಸರ್ಕಾರವು ಸಕ್ಷಮ ಪ್ರಾಧಿಕಾರವೆಂದು ಅಧಿಸೂಚಿಸಲ್ಪಟ್ಟ ಅಧಿಕಾರಿ.

(ಇ) **“ನಮೂನೆ”** ಎಂದರೆ ಈ ನಿಯಮಗಳಿಗೆ ಅನುಬಂಧಿಸಲಾದ ನಮೂನೆ.

(ಈ) **“ಪ್ರಕರಣ”** ಎಂದರೆ ಅಧಿನಿಯಮದ ಪ್ರಕರಣ.

**(3) ಅಡೆತಡೆ ಮತ್ತು ಒತ್ತುವರಿಗಳನ್ನು ತೆಗೆದು ಹಾಕಲು ಅರ್ಜಿ,-**(1) ಯುಕ್ತವಾಗಿ ಅಧಿಕೃತನಾಗಿಲ್ಲದ ಯಾವುದೇ ವ್ಯಕ್ತಿಯು ಗ್ರಾಮ ಪಂಚಾಯಿತಿ/ಪೆರಂಬೊಕ್ ಭೂಮಿ, ಸಾರ್ವಜನಿಕ ಬೀದಿಗಳು, ಸ್ಥಳ, ಅನುಪಯುಕ್ತ ಭೂಮಿ, ಕಾಲುವೆಗಳು, ಕೆರೆಗಳು, ಆಟದ ಮೈದಾನ, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕಾಗಿ ಇರಿಸಿರುವ ಪ್ರದೇಶ, ಸ್ಮಶಾನ ಅಥವಾ ರುದ್ರಭೂಮಿ, ಖಾಸಗಿ ಸ್ವತ್ತಾಗಿಲ್ಲದ ಯಾವುದೇ ಬೀದಿ, ನಿವೇಶನ ಅಥವಾ ಸ್ಥಳಗಳಲ್ಲಿರುವ ಯಾವುದೇ ತೆರೆದ ಚರಂಡಿ, ಗಟಾರ, ಗ್ರಾಮಸಾರ ಚರಂಡಿ ಅಥವಾ ಮೇಲುಕಾಲುವೆ ಅಥವಾ ಅವುಗಳ ಹೊರಗೆ ಅಥವಾ ಮೇಲೆ ಅನಧಿಕೃತವಾಗಿ ಯಾವುದೇ ಒತ್ತುವರಿ ಅಥವಾ ಅಡೆತಡೆಗಳನ್ನು ಉಂಟು ಮಾಡಿದ್ದರೆ ಅಥವಾ ಉಂಟು ಮಾಡಲು ಮುಂದಾಗಿದ್ದರೆ ಮತ್ತು ಅಧಿನಿಯಮದ ಪ್ರಕರಣ 72ರ ಉಪ ಪ್ರಕರಣ (1) ಮತ್ತು (2)ರಲ್ಲಿ ನಿರ್ದಿಷ್ಟಪಡಿಸಿದಂತೆ ಗೃಹಬಳಕೆಗಾಗಿ ಉಪಯೋಗಿಸುವ ಮರಳನ್ನು ಹೊರತುಪಡಿಸಿ ಮಣ್ಣು, ಮರಳು ಅಥವಾ ಇತರೆ ಸಾಮಗ್ರಿಗಳನ್ನು ತೆಗೆದು ಹಾಕಿದರೆ ಅಥವಾ ಅದರ ಮೇಲೆ ಯಾವುದೇ ಒತ್ತುವರಿಯನ್ನು ಮಾಡಿರುವುದು ಯಾವುದೇ ವ್ಯಕ್ತಿಗೆ ಕಂಡುಬಂದಲ್ಲಿ ಆತನು ವಿಷಯಾನುಗುಣವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ ಗ್ರಾಮ ಲೆಕ್ಕಾಧಿಕಾರಿ ಇವರಿಗೆ ಅಡೆತಡೆ ಮತ್ತು ಒತ್ತುವರಿಯ ನಿರ್ದಿಷ್ಟ ವಿವರಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.

(2) ಉಪ ನಿಯಮ (1) ರನ್ವಯ ಸ್ವೀಕರಿಸಿದ ಅರ್ಜಿಯನ್ನು ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ ಗ್ರಾಮ ಲೆಕ್ಕಾಧಿಕಾರಿಯು ತನ್ನ ವರದಿ ಮತ್ತು ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಆದಷ್ಟು ಶೀಘ್ರವಾಗಿ ಮತ್ತು ಅರ್ಜಿ ಸ್ವೀಕರಿದಿದ 15 ದಿನಗಳೊಳಗಾಗಿ ರವಾನಿಸತಕ್ಕದ್ದು.

(3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ ಗ್ರಾಮ ಲೆಕ್ಕಾಧಿಕಾರಿ ಇವರುಗಳಿಗೆ ಯುಕ್ತವಾಗಿ ಅಧಿಕೃತನಾಗಿಲ್ಲದ ಯಾವುದೇ ವ್ಯಕ್ತಿಯು ಗ್ರಾಮ ಪಂಚಾಯಿತಿ/ಪೆರಂಬೊಕ್ ಭೂಮಿ, ಸಾರ್ವಜನಿಕ ರಸ್ತೆ, ಸ್ಥಳ, ಅನುಪಯುಕ್ತ ಭೂಮಿ, ಕಾಲುವೆಗಳು, ಕೆರೆಗಳು, ಆಟದ ಮೈದಾನ, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕಾಗಿ ಇರಿಸಿರುವ ಪ್ರದೇಶ, ಸ್ಮಶಾನ ಅಥವಾ ರುದ್ರಭೂಮಿ, ಖಾಸಗಿ ಸ್ವತ್ತಾಗಿಲ್ಲದ ಯಾವುದೇ ಬೀದಿ, ನಿವೇಶನ ಅಥವಾ ಸ್ಥಳಗಳಲ್ಲಿರುವ ಯಾವುದೇ ತೆರೆದ ಚರಂಡಿ, ಗಟಾರೆ, ಗ್ರಾಮಸಾರ ಚರಂಡಿ ಅಥವಾ ಮೇಲುಕಾಲುವೆ ಅಥವಾ ಅವುಗಳ ಹೊರಗೆ ಅಥವಾ ಮೇಲೆ ಅನಧಿಕೃತವಾಗಿ ಯಾವುದೇ ಒತ್ತುವರಿ ಅಥವಾ ಅಡೆತಡೆಗಳನ್ನು ಉಂಟು ಮಾಡಲು ಮುಂದಾಗಿದ್ದರೆ ಮತ್ತು ಅಧಿನಿಯಮದ ಪ್ರಕರಣ 72 ರ ಉಪ ಪ್ರಕರಣ (1) ಮತ್ತು (2) ರಲ್ಲಿ ನಿರ್ದಿಷ್ಟಪಡಿಸಿದಂತೆ ಗೃಹಬಳಕೆಗಾಗಿ ಉಪಯೋಗಿಸುವ ಮರಳನ್ನು ಹೊರತುಪಡಿಸಿ ಮಣ್ಣು, ಮರಳು ಅಥವಾ ಇತರೆ ಸಾಮಗ್ರಿಗಳನ್ನು ತೆಗೆದು ಹಾಕಿದರೆ ಅಥವಾ ಅದರ ಮೇಲೆ ಯಾವುದೇ ಒತ್ತುವರಿಯನ್ನು ಮಾಡಿರುವುದು ಕಂಡು ಬಂದರೆ ತಾನಾಗಿಯೇ ಅಗತ್ಯ ದಾಖಲಾತಿಗಳೊಂದಿಗೆ ಸಕ್ಷಮ ಪ್ರಾಧಿಕಾರಕ್ಕೆ ಅದಷ್ಟು ಶೀಘ್ರವಾಗಿ ಮತ್ತು

ಅಂತಹ ಅಡೆತಡೆ ಹಾಗೂ ಒತ್ತುವರಿಗಳು ಅವರ ಗಮನಕ್ಕೆ ಬಂದ 15 ದಿನಗಳೊಳಗಾಗಿ ವರದಿಯನ್ನು ಕಳುಹಿಸತಕ್ಕದ್ದು.

(4) ವಿಚಾರಣೆ ನಡೆಸುವಿಕೆ,- (1) ಮೇಲೆ ನಿಯಮ (3) ರಲ್ಲಿನ ಉಪ ನಿಯಮ (2) ಅಥವಾ (3) ರಲ್ಲಿರುವಂತೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಸಕ್ಷಮ ಪ್ರಾಧಿಕಾರವು ವಿಚಾರಣೆಯ ದಿನಾಂಕ ಮತ್ತು ಸಮಯವನ್ನು ನಿಗದಿಗೊಳಿಸಿ ನಮೂನೆ-ಎ ರಲ್ಲಿ ಸೂಚನೆಯನ್ನು ಅಡೆತಡೆ ಮತ್ತು ಒತ್ತುವರಿಯನ್ನು ಉಂಟು ಮಾಡಿರುವ ವ್ಯಕ್ತಿಗೆ ಮತ್ತು ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ ಗ್ರಾಮ ಲೆಕ್ಕಾಧಿಕಾರಿಗೆ ಜಾರಿಗೊಳಿಸತಕ್ಕದ್ದು.

(2) ನಿಗದಿಗೊಳಿಸಿದ ದಿನಾಂಕದಂದು ಸಕ್ಷಮ ಪ್ರಾಧಿಕಾರಿಯು ಎರಡೂ ಕಡೆಯ ವ್ಯಕ್ತಿಗಳ ಅಹವಾಲನ್ನು ಕೇಳಿ ನಂತರ ಅಡೆತಡೆ ಮತ್ತು ಒತ್ತುವರಿಯ ಬಗ್ಗೆ ಒಟ್ಟಾರೆಯಾಗಿ ತೀರ್ಮಾನಿಸತಕ್ಕದ್ದು.

(3) ಸಕ್ಷಮ ಪ್ರಾಧಿಕಾರವು ಅಧಿನಿಯಮದ ಪ್ರಕರಣ 72 ಉಪ ಪ್ರಕರಣ (1) ಮತ್ತು (2) ರಲ್ಲಿ ನಿರ್ದಿಷ್ಟಪಡಿಸಿದಂತೆ ಅಡೆತಡೆ ಮತ್ತು ಒತ್ತುವರಿ ಆಗಿದೆ ಎಂದು ತೀರ್ಮಾನಿಸಿದಲ್ಲಿ ಸೂಕ್ತ ಆದೇಶಗಳನ್ನು ಹೊರಡಿಸತಕ್ಕದ್ದು ಮತ್ತು ಆದೇಶದ ಪ್ರತಿಗಳನ್ನು ಅಡತಡೆ ಮತ್ತು ಒತ್ತುವರಿಯನ್ನು ಉಂಟು ಮಾಡಿರುವ ವ್ಯಕ್ತಿಗೆ ಜಾರಿಗೊಳಿಸತಕ್ಕದ್ದು.

(4) ಉಪ ನಿಯಮ (3) ರಲ್ಲಿ ತಿಳಿಸಿರುವಂತೆ ಅಡೆತಡೆ ಮತ್ತು ಒತ್ತುವರಿ ಆದೇಶವನ್ನು ಜಾರಿಗೊಳಿಸಿರುವ ವ್ಯಕ್ತಿಯು ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂತಹ ಅನಧಿಕೃತ ಅಡೆತಡೆ ಮತ್ತು ಒತ್ತುವರಿಗಳನ್ನು ತೆರವುಗೊಳಿಸತಕ್ಕದ್ದು, ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆದೇಶವನ್ನು ಪಾಲಿಸಲು ಆ ವ್ಯಕ್ತಿಯು ವಿಫಲನಾದಲ್ಲಿ ಸಕ್ಷಮ ಪ್ರಾಧಿಕಾರವು ಅಂತಹ ಅಡೆತಡೆ ಮತ್ತು ಒತ್ತುವರಿಗಳನ್ನು ತೆರವುಗೊಳಿಸತಕ್ಕದ್ದು ಮತ್ತು ಅದಕ್ಕೆ ತಗಲುವ ವೆಚ್ಚವನ್ನು ಅಡೆತಡೆ ಮತ್ತು ಒತ್ತುವರಿ ಉಂಟು ಮಾಡಿದ ವ್ಯಕ್ತಿಯಿಂದ ಅಧಿನಿಯಮದ ಪ್ರಕರಣ 199 ರನ್ವಯ ವಿಧಿಸಲಾದ ತೆರಿಗೆಯೆಂದು ಪರಿಗಣಿಸಿ ವಸೂಲಿ ಮಾಡತಕ್ಕದ್ದು.

(5) ಮೇಲ್ಮನವಿ,-(1) ಸಕ್ಷಮ ಪ್ರಾಧಿಕಾರವು ಹೊರಡಿಸಿದ ಆದೇಶದಿಂದ ಬಾಧಿತನಾದ ವ್ಯಕ್ತಿಯು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಆದೇಶ ಸ್ವೀಕರಿದ ದಿನಾಂಕದಿಂದ 30 ದಿನಗಳೊಳಗಾಗಿ ಮೇಲ್ಮನವಿ ಸಲ್ಲಿಸಬಹುದು.

(2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ ಮತ್ತು ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಮೇಲ್ಮನವಿಯನ್ನು ತೀರ್ಮಾನಿಸಬಹುದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ
ಹೆಸರಿನಲ್ಲಿ,

ಸ್ವರ್ಣಲತಾ ಎಂ ಭಂಡಾರೆ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ನಮೂನೆ-ಎ
(ನಿಯಮ 4 ರ ಅನ್ವಯ)

ಗೆ:
ಶ್ರೀಮತಿ/ಶ್ರೀ________________
__________________________
__________________________

ಸೂಚನಾ ಪತ್ರ

ಶ್ರೀಮತಿ/ಶ್ರೀ __________________________________________ ಆದ ನೀವು __________ (ಆಸ್ತಿಯ ವಿವರಣೆ) ಗೆ _______________ ಗ್ರಾಮ ಪಂಚಾಯಿತಿಗೆ ಸೇರಿದ _______________ (ಪ್ರದೇಶದ ಅಳತೆ) ನಿವೇಶನವನ್ನು ___________ ಮಾಡುವುದರ ಮೂಲಕ ಒತ್ತುವರಿ ಮಾರಿರುತ್ತೀರಿ.

ನೀವು ದಿನಾಂಕ: ____________ ರಂದು _____________ ಗಂಟೆಗೆ _____________ ಇಲ್ಲಿ ಈ ಕೆಳಗೆ ಸಹಿ ಮಾಡಿರುವ ಪ್ರಾಧಿಕಾರದ ಮುಂದೆ ನೀವಾಗಲೀ ಅಥವಾ ನಿಮ್ಮಿಂದ ನಾಮನಿರ್ದೇಶನಗೊಂಡ ಪ್ರತಿನಿಧಿಯಾಗಲೀ ಈ ಒತ್ತುವರಿಗೆ ಸಂಬಂಧಿಸಿದ ವಿಚಾರಣೆಗೆ ಹಾಜರಾಗತಕ್ಕದ್ದು.

ಈ ಮೇಲೆ ನಿಗದಿಪಡಿಸಿದ ದಿನಾಂಕ ಮತ್ತು ಸ್ಥಳದಲ್ಲಿ ತಮ್ಮ ಅಹವಾಲಿಗೆ ಪೂರಕವಾದ ದಾಖಲಾತಿಗಳನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸತಕ್ಕದ್ದು.

ಈ ನೋಟೀಸ್ ನಲ್ಲಿ ತಿಳಿಸಿರುವಂತೆ ನೀವಾಗಲೀ ಅಥವಾ ನಿಮ್ಮಿಂದ ನಾಮನಿರ್ದೇಶನಗೊಂಡ ಪ್ರತಿನಿಧಿಯಾಗಲೀ ಹಾಜರಾಗದಿದ್ದಲ್ಲಿ ಮೇಲೆ ತಿಳಿಸಿರುವ ಒತ್ತುವರಿಯನ್ನು/ಬೇಡಿಕೆಯನ್ನು ನಿಮ್ಮ ಗೈರುಹಾಜರಿಯಲ್ಲಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ:_______________

ಸಕ್ಷಮ ಪ್ರಾಧಿಕಾರ.